2. ಲಾಭ : ನಷ್ಟಗಳ ಮೊತ್ತ :

ರೂ. ಲಕ್ಷಗಳಲ್ಲಿ

ವರ್ಷ	ಲಾಭ	ನಷ್ಟ
1983-84	-	238.67
1984-85	-	202.61
1985-86	-	148.87
1986-87	-	166.92
1987-88	84.10	-
1988-89	76.68	-
1989-90	129.06	-
1990-91	7.44	-
1991-92	10.38	-

ಈ) ಬಂದಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ವಿಷಯ :- ರಾಜ್ಯದಲ್ಲಿರುವ ರೈತರ ಸರ್ಕಾರಿ ನೂಲಿನ ಗಿರಣಿಗಳ ಸಂಖ್ಯೆ.

Q:1397

ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಜವಳಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ರೈತರ ಸಹಕಾರಿ ನೂಲಿನ ಗಿರಣಿಗಳೆಷ್ಟು?

ಆ) ಸಹಕಾರಿ ನೂಲಿನ ಗಿರಣಿ ಸ್ಥಾಪಿಸಲು ಸರ್ಕಾರದವರು ರೈತರಿಂದ ಮೊದಲು 50 ಲಕ್ಷ ರೂ. ಕೂಡಿಸಿದ ನಂತರ ಪರವಾನಗಿ ಕೊಡಬೇಕೆಂದು ಆದೇಶ ಮಾಡಲಾಗಿದೆಯೇ?

ಇ) ಹಾಗಿದ್ದಲ್ಲಿ ಸಹಕಾರಿ ಕ್ಷೇತ್ರದಲ್ಲಿ ರೈತರ ಹಕ್ಕು ಮೊಟಕುಗೊಳಿಸಿ ಪ್ರೋತ್ಸಾಹ ಕೊಡುವ ಬದಲು ರೈತರಿಗೆ ತೊಂದರೆ ಕೊಟ್ಟ ಹಾಗೆ ಆಗುವುದಿಲ್ಲವೆ ?

ಈ) ಸದರಿ ಸರ್ಕಾರಿ ಆದೇಶ ಮಾಡಿದ ನಂತರ ಯಾರಾದರೂ ರೈತರು ನೂಲಿನ ಗಿರಣಿ ಸ್ಥಾಪಿಸಲು ಮುಂದೆ ಬಂದಿದ್ದಾರೆಯೇ?

ಉ) ಹಾಗಿದ್ದಲ್ಲಿ, ಸರ್ಕಾರದವರು ಯೋಗ್ಯ ತಿದ್ದುಪಡಿ ಮಾಡಿ ಸರ್ಕಾರದ ಆದೇಶ ಹಿಂದೆ ಪಡೆಯಲಾಗುವುದೇ?

ಶ್ರೀ ಹೆಚ್. ಕೆ. ಪಾಟೀಲ್ (ಜವಳಿ ರಾಜ್ಯ ಮಂತ್ರಿಗಳು)

ಅ) ಒಟ್ಟು ನೋಂದಣಿಯಾಗಿರುವ ರೈತರ
ಸಹಕಾರಿ ಗಿರಣಿಗಳು : 17
ಕೆಲಸ ಮಾಡುತ್ತಿರು ಗಿರಣಿಗಳು : 10
ಸ್ಥಾಪಿತಗೊಳ್ಳುತ್ತಿರುವ ಗಿರಣಿಗಳು : 01
ಸ್ಥಾಪನೆಗೊಳ್ಳಬೇಕಾಗಿರುವ ಗಿರಣಿಗಳು : 06
ಆ) ಹೌದು.
ಇ) ಇಲ್ಲ.
ಈ) ಇಲ್ಲ.
ಉ) ಪರಿಶೀಲಿಸಲಾಗುವುದು.

ವಿಷಯ :- ಸಿಂಧನೂರು ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ.

Q:1320
ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ಪಟ್ಟಣದ ಕುಡಿಯುವ ನೀರಿನ ಯೋಜನೆಗೆ ಸರ್ಕಾರವು ಮಂಜೂರು ಮಾಡಿರುವ ಹಣವೆಷ್ಟು? ಮತ್ತು 1992-93ನೇ ಸಾಲಿನವರೆಗೆ ಖರ್ಚಾದ ಹಣವೆಷ್ಟು?
ಆ) ಈ ಯೋಜನೆ ಯಾವ ಹಂತದಲ್ಲಿದೆ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಸರ್ಕಾರವು ರೂ. 250.00 ಲಕ್ಷಗಳ ಯೋಜನೆಯನ್ನು ಮಂಜೂರು ಮಾಡಿದೆ. 1992 ರ ಡಿಸೆಂಬರ್ ತಿಂಗಳ ಕೊನೆಗೆ 277.28 ಲಕ್ಷ ರೂ.ಗಳು ಖರ್ಚಾಗಿರುವುದು.
ಆ) ಈ ಕೆಲಸವು ಶೇಕಡ 50 ರಷ್ಟು ಮುಗಿದಿದೆ.

ವಿಷಯ :- ರಾಜ್ಯದಲ್ಲಿ ಬಾಲ ಕಾರ್ಮಿಕರು.

Q:1552
ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ಎಷ್ಟು ಬಾಲ ಕಾರ್ಮಿಕರಿದ್ದಾರೆ? ಜಿಲ್ಲಾವಾರು ವಿವರ ನೀಡುವುದು?
2) ಬಾಲ ಕಾರ್ಮಿಕರಿಗೆ ಉಚಿತ ವಿದ್ಯಾಭ್ಯಾಸ ನೀಡಲು ಸರ್ಕಾರ ಯೋಜಿಸಿದೆಯೇ?
3) ಬಾಲ ಕಾರ್ಮಿಕರಿಗೆ ಅತಿ ಕಡಿಮೆ ಹಣ ನೀಡಿ ದಿನವಿಡೀ ಅವರಿಂದ ಕೆಲಸ